ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕಃ 25.02.2025.

**ಹೆಚ್ಚುವರಿ ಮುಖ್ಯ ವಿಚಾರಣೆಃ** ವಾದಿ ಪರ ಶ್ರೀ ಬಿ.ಎ.ಡಿ. ವಕೀಲರಿಂದಃ

ನನ್ನ ಮುಖ್ಯ ವಿಚಾರಣೆಯ ಸಲುವಾಗಿ ಪ್ರಮಾಣ ಪತ್ರವನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಅದರಲ್ಲಿರುವ ಎಲ್ಲಾ ಅಂಶಗಳು ಸತ್ಯದಿಂದಾ ಕೂಡಿದ್ದು, ಅದನ್ನು ನನ್ನ ಸೂಚನೆಯ ಮೇರೆಗೆ ತಯಾರಿಸಲಾಗಿರುತ್ತದೆ ಮತ್ತು ನಾನು ಅದಕ್ಕೆ ಸಹಿ ಮಾಡಿರುತ್ತೇನೆ.

ಇಂದು ನಾನು ದಾವೆಗೆ ಸಂಬಂಧಪಟ್ಟಂತೆ ಕೆಲವು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ, ಅವುಗಳನ್ನು ನನ್ನ ಪರವಾಗಿ ಪರಿಗಣಿಸಬೇಕಾಗಿ ವಿನಂತಿಸಿಕೊಳ್ಳುತ್ತೇನೆ.

ದಿಃ 13.05.1985ರ ಕ್ರಯ ಪತ್ರದ ದೃಢಿಕೃತ ನಕಲನ್ನು ನಿಪಿ-3 ಎಂದು, ದೃಢಿಕೃತ ನಕಲಿನ ಕ್ರಯ ಪತ್ರವನ್ನು ನಿಪಿ-4 ಎಂದು, ಎರಡು ಮ್ಯೂಟೆಷನ್‌ಗಳನ್ನು ಕ್ರಮವಾಗಿ ನಿಪಿ-5 ಮತ್ತು ನಿಪಿ-6 ಎಂದು, ಸರ್ವೆ ನಂ.436/ಇ, ಇದರ ಆರ್‌ಟಿಸಿಯನ್ನು ನಿಪಿ-7 ಎಂದು, ಸರ್ವೆ ನಂ.436/1ರ 2010-11ನೇ ಸಾಲಿನಿಂದ 2019-20ನೇ ಸಾಲಿನವರೆಗೆ ಇರುವ ಪಹಣಿಗಳನ್ನು ಒಟ್ಟಾರೆ ನಿಪಿ-8 ಎಂದು, ಸರ್ವೆ ನಂ.436/2ರ 2020-21ನೇ ಸಾಲಿನಿಂದ 2021-22ನೇ ಸಾಲಿನವರೆಗೆ ಇರುವ ಎರಡು ಪಹಣಿಗಳನ್ನು ಒಟ್ಟಾರೆ ನಿಪಿ-9 ಎಂದು, ಸರ್ವೆ ನಂ.436/7ರ ಎರಡು ಪಹಣಿಗಳನ್ನು ಒಟ್ಟಾರೆ ನಿಪಿ-10 ಎಂದು, ಹಿಂಬಹರವನ್ನು ನಿಪಿ-11 ಎಂದು, ಅಸೆಸ್‌ಮೆಟ್‌ನ್ನು ನಿಪಿ-12 ಎಂದು ಗುರುತಿಸಲಾಯಿತು.

ಆದ್ದರಿಂದ ನಾನು ನನ್ನ ದಾವೆಯಲ್ಲಿ ಕೇಳಿದಂತೆ ಡಿಕ್ರಿ ಮಾಡಬೇಕೆಂದು ಮಾನ್ಯ ನ್ಯಾಯಾಲಯಕ್ಕೆ ಪ್ರಾರ್ಥಿಸಿಕೊಳ್ಳುತ್ತೇನೆ.

**ವಾಟೀ ಸವಾಲುಃ** ಪ್ರತಿವಾದಿ ಪರ ವಕೀಲರಿಂದಃ

(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಪಾಟೀ ಸವಾಲು ಮಾಡಲು ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಆಳಂದ.**